ಶ್ರೀ ಎಸ್. ಎಂ. ಕೃಷ್ಣ.—ಈಗ ಲೋಕೋಪಯೋಗಿ ಇಲಾಖೆಯ ಸೀಮಿತಕ್ಕೆ ಒಳಪಟ್ಟಿರುವ ಕ್ವಾರಿಗಳನ್ನು ಬಿಟ್ಟು ಬೇರೆ ಕ್ವಾರಿಗಳಲ್ಲಿ ಕಲ್ಲನ್ನು ತೆಗೆಯಲು ಲೀಸ್‌ಗೆ ಕೊಡಲಾಗಿದೆ. ಅದರಂತೆ ಬೆಂಗಳೂರು ಡಿವಿಜನ್‌ನಲ್ಲಿ 322, ಬಳ್ಳಾರಿ ಡಿವಿಜನ್‌ನಲ್ಲಿ 69, ಗುಲ್ಬರ್ಗದ ಡಿವಿಜನ್‌ನಲ್ಲಿ 130, ಬೆಳಗಾಂ ಡಿವಿಜನ್‌ನಲ್ಲಿ 96, ದಕ್ಷಿಣ ಕನ್ನಡ ಜಿಲ್ಲೆಯ ಡಿವಿಜನ್‌ನಲ್ಲಿ 32 ಕಡೆಗಳಲ್ಲಿ ಕಲ್ಲನ್ನು ತೆಗೆಯಲು ಲೀಸ್‌ಗೆ ಕೊಡಲಾಗಿದೆ. ಇದರಿಂದ ಸರ್ಕಾರಕ್ಕೆ 9 ಲಕ್ಷದ 25 ಸಾವಿರ ರೂಪಾಯಿಗಳ ರಾಯಲ್ಟಿ ಬರುತ್ತಿದೆ. ಇದನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರದವರು ಸತತವಾಗಿ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ದೇಶದಾದ್ಯಂತ ಅನೇಕ ಕಡೆಗಳಲ್ಲಿ ಕಲ್ಲು ಬಂಡೆಗಳಿವೆ. ಆದರೆ ಅದರಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯ ಕೇವಲ 9 ಲಕ್ಷ ರೂಪಾಯಿಗಳು. ಇದನ್ನು ಹೆಚ್ಚು ಮಾಡುವ ಉದ್ದೇಶದಿಂದ ಮತ್ತು ಕಲ್ಲುಗಳನ್ನು ಹೆಚ್ಚು ಹೆಚ್ಚಾಗಿ ಹೊಡೆಸಲು ಬೇಕಾಗುವ ಯಂತ್ರಗಳನ್ನು ಕೊಳ್ಳುವ ಉದ್ದೇಶದಿಂದ ಇದಕ್ಕೆ ಸಂಬಂಧಪಟ್ಟಂತೆ ಒಂದು ಕಾರ್ಪೊರೇಷನ್ ಸ್ಥಾಪನೆ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ರಾಯಲ್ಟಿಯನ್ನು ಹೆಚ್ಚು ಪಡೆಯಬೇಕೆಂಬುದೇ ಸರ್ಕಾರದ ಉದ್ದೇಶ. ಆದರೆ ಅದಕ್ಕಾಗಿ ಒಂದು ಕಾರ್ಪೊರೇಷನ್‌ನನ್ನು ಮಾಡುವುದರಿಂದ ಅದು ಫಲಿಸುತ್ತದೆ ಎಂಬ ಬಗ್ಗೆ ಸಾಕಷ್ಟು ಅನುಮಾನ ಸರ್ಕಾರಕ್ಕೆ ಇದೆ.

BUILDING TO HOUSE MUNSIFF AND JMFC COURT AT YELLAPUR.

9. Sri V. M. GHADI (Haliyal).—

Will the Minister for Community Development and Social Welfare be pleased to state:—

(*a*) whether it is a fact that the T.D.B. Yellapur had resolved unanimously in the year 1971 and 1972 that the Board would provide their own building rent free for one year to house the Munsiff and JMFC Court at Yellapur;

(*b*) whether the resolution passed by the Board had to be approved by the Deputy Commissioner;

(*c*) if so, whether the above resolution has been approved by the Deputy Commissioner;

(*d*) if so, whether it has come to the notice of Government that the Deputy Commissioner has demanded to deposit one year's rent when the District Judge had come to inspect and approved the said building for locating the Court;

(*e*) whether it has come to the notice of Government that the said amount has been credited;

(*f*) if so, the reasons why the Deputy Commissioner has objected to the location of the Court?

Sri N. RACHIAH (Minister for Community Development and Social Welfare) .—

(*a*) No. It had resolved only once on 19th February 1973 to provide rent free accommodation, provided the Court was to commence immediately.

(*b*) No.

(*c*) in view of reply given to Clause (*b*) above, the question does not arise.

(*d*) No.

(*e*) Yes. The amount has been credited by Sri V. P. Bhat, Advocate.

(*f*) The Deputy Commissioner did not object to the location of the Court.

ಶ್ರೀ ವಿ. ಎಂ. ಘಾಡಿ.—ತಾಲ್ಲೂಕು ಬೋರ್ಡಿನವರು ಪಾಸ್ ಮಾಡುವ ಪ್ರತಿಯೊಂದು ಠರಾವನ್ನು ಜಿಲ್ಲಾಧಿಕಾರಿಯವರಿಗೆ ಕಳಿಸಿಕೊಡಬೇಕಾಗುತ್ತದೆ. ಅದರಂತೆ ಈ ವಿಚಾರದಲ್ಲಿಯೂ ಠರಾವನ್ನು ಪಾಸ್ ಮಾಡಿ ಕಳಿಸಿಕೊಡಲಾಗಿತ್ತು. ಆದರೆ ತಾವು ಉತ್ತರದಲ್ಲಿ ಇಲ್ಲ ಎಂದು ಹೇಳಿರುವುದು ಸರಿಯೇ ?

† ಶ್ರೀ ಎನ್. ರಾಚಯ್ಯ.—ಪಾಸ್ ಮಾಡಿದಂಥ ನಿರ್ಣಯಗಳನ್ನು ಕಳಿಸಿಕೊಡಬೇಕೆಂದು ನಿಯಮವಿದೆ. ಆದರೆ ಎಲ್ಲವನ್ನೂ ಅಪ್ರೂವ್ ಮಾಡಬೇಕು ಎಂದು ನಿಯಮವೇನೂ ಇಲ್ಲ. ಆದರೆ ಈ ವಿಚಾರದಲ್ಲಿ ನಾನು ಮಾನ್ಯ ಸದಸ್ಯರ ಜೊತೆಯಲ್ಲಿ ಪ್ರಸ್ತಾಪ ಮಾಡಿದಾಗ, ಅವರ ಭಾವನೆ ಏನಿದೆ ಎಂದರೆ, ಈ ಕೋರ್ಟನ್ನು ಸಂಸ್ಥಾಪನೆ ಮಾಡುವ ಸಮಯದಲ್ಲಿ ಯಾವ ರೀತಿ ಜಿಲ್ಲಾಧಿಕಾರಿಯವರು ಜವಬ್ದಾರಿ ವಹಿಸಿಕೊಂಡು ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರದ ಆಜ್ಞೆಯನ್ನು ಪರಿಪಾಲನೆ ಮಾಡಬೇಕಾಗಿತ್ತೋ ಆ ರೀತಿ ಮಾಡಲಿಲ್ಲ ಎಂಬುದು. ಈ ಬಗ್ಗೆ ನಾನು ಸೂಕ್ತ ರೀತಿಯಲ್ಲಿ ವಿಚಾರಣೆ ಮಾಡುತ್ತೇನೆ.

ಶ್ರೀ ವಿ. ಎಂ. ಘಾಡಿ.—ಡಿಸ್ಟ್ರಿಕ್ಟ್ ಜಡ್ಜ್ ಆ ಕಟ್ಟಡವನ್ನು ಇನ್ಸ್‌ಪೆಕ್ಟ್ ಮಾಡಲು ಬಂದಾಗ ಜಿಲ್ಲಾಧಿಕಾರಿಯವರು ಒಂದು ವರ್ಷದ ರೆಂಟನ್ನು ಡಿಪಾಜಿಟ್ ಮಾಡಬೇಕೆಂದು ಡಿಮ್ಯಾಂಡ್ ಮಾಡಿದ್ದು ನಿಜವಲ್ಲವೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೀರಿ. ಆದರೆ ಸಾರ್ವಜನಿಕರಿಗೆ ಅನುಕೂಲವಾಗುವಂತಹ ವಿಷಯದಲ್ಲಿ ಜಿಲ್ಲಾಧಿಕಾರಿಯವರು ಅಡ್ಡಿ ಮಾಡಿದ್ದು ಸರಿಯೇ ? ಈ ಬಗ್ಗೆ ಯೋಗ್ಯವಾದ ಕ್ರಮವನ್ನು ಕೈಗೊಳ್ಳುತ್ತೀರಾ ?

ಶ್ರೀ ಎನ್. ರಾಚಯ್ಯ.—ವಿಚಾರಣೆ ಮಾಡುತ್ತೇನೆಂದು ಈಗಾಗಲೇ ಹೇಳಿದ್ದೇನೆ. ಆದರಲ್ಲಿ ಏನಾದರೂ ಸತ್ಯಾಂಶ ಕಂಡುಬಂದರೆ ಮುಂದಿನ ಕ್ರಮ ಕೈಕೊಳ್ಳುತ್ತೇನೆ.

SETTLEMENT OF BILLS OF SOCIETIES IN TUMKUR DISTRICT.

55. Sri R. CHIKKAIAH (Madhugiri) .—

Will the Minister for Food and Forests be pleased to state :—

(*a*) the number of Societies which are yet to settle the bills with Government in respect of transportation, handling and other charges during the last 3 years in Tumkur District;